ಅನುತ್ತೀರ್ಣರಹಿತ ನೀತಿಯನ್ನು ರದ್ದುಗೊಳಿಸುವ ಆಲೋಚನೆಯು ಮಕ್ಕಳ ಕಲಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಅಗತ್ಯಕ್ಕೆ ವಿರುದ್ಧವಾದುದಾಗಿದೆ. ಒಂದೇ ವಯೋಗುಂಪಿನ ಮಕ್ಕಳು ತಪ್ಪದೇ ವ್ಯಕ್ತಿಗತ ಗತಿಯಲ್ಲಿ ಕಲಿಯುತ್ತಾರೆ ಹಾಗೂ ಕನಿಷ್ಠ ಕಲಿಕಾ ಮಟ್ಟವನ್ನು ವಿವಿಧ ಹಂತಗಳ ಮೂಲಕ ಗಳಿಸುತ್ತಾರೆ ಎನ್ನುವುದು ನಿರಂತರ ಸಮಗ್ರ ಮೌಲ್ಯಮಾಪನದ ಅಂತರ್ಗತ ನಂಬಿಕೆ.

ಅನುತ್ತೀರ್ಣರಹಿತ ನೀತಿಯನ್ನು ಹಿಂತೆಗೆದುಕೊಳ್ಳುವುದರ ಅಪಾಯಗಳು

ಮೇ ತಿಂಗಳ ಕೊನೆಯ ವಾರದಲ್ಲಿ ಶಾಲೆಗಳು ಪುನರಾರಂಭಗೊಳ್ಳುವುದರೊಂದಿಗೆ ಹೊಸ ಶೈಕ್ಷಣಿಕ ವರ್ಷವು ಆರಂಭವಾದಾಗ, ಶಿಕ್ಷಕರು ತಮ್ಮ ಶಾಲಾ ಆವರಣ ಮತ್ತು ತರಗತಿ ಕೋಣೆಗಳನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ, ಹೊಸ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವುದರಲ್ಲಿ, ಚಟುವಟಿಕೆಗಳನ್ನು ಯೋಜಿಸುವುದರಲ್ಲಿ ಹಾಗೂ ಮಾಸಿಕ ವೇಳಾಪಟ್ಟಿ (ಕ್ಯಾಲೆಂಡರ್)ಯನ್ನು ತಯಾರಿಸುವುದರಲ್ಲಿ ನಿರತರಾಗಿದ್ದರು. ಸರ್ಕಾರದಿಂದ ಪೂರೈಸಲಾದ ಪಠ್ಯಪುಸ್ತಕಗಳನ್ನು ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ ಮಕ್ಕಳಿಗೆ ವಿತರಿಸಲೆಂದು ಒಪ್ಪವಾಗಿ ಪೇರಿಸಿಡಲಾಗಿತ್ತು. ರಜೆಯಲ್ಲಿ ತಮ್ಮ ತಮ್ಮ ಊರುಗಳಿಗೆ ಹೋಗಿರುವ ಮಕ್ಕಳು ನಿಧಾನವಾಗಿ ಹಿಂದಿರುಗುತ್ತಿರುವುದರಿಂದ ಮೊದಲ ವಾರದಲ್ಲಿ ಶಾಲೆಯಲ್ಲಿ ಹಾಜರಾತಿಯ ಪ್ರಮಾಣ ಸುಮಾರು ಶೇ. 50–60 ಅಷ್ಟೇ ಇತ್ತು.

ಇಬ್ಬರು ಹಿರಿಯ ಶಿಕ್ಷಕರು ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ ಕುಳಿತು, ಕೆಲವು ನಮೂನೆಗಳನ್ನು ಭರ್ತಿ ಮಾಡುತ್ತ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆಗ ಅಲ್ಲಿಗೆ ಬಂದ ಪಾಲಕರೊಬ್ಬರು ಅಸಮಾಧಾನದಿಂದ ಆ ಶಿಕ್ಷಕರಲ್ಲಿ ದೂರು ಹೇಳತೊಡಗಿದರು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು

ಕಠಿಣ ಮನಸ್ಕರಾಗಿದ್ದು ತಮ್ಮ ಮಗನಿಗೆ ಒಂಬತ್ತನೆಯ ತರಗತಿಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲು ಮೃದುಧೋರಣೆಯನ್ನು ತೋರಿಸುತ್ತಿಲ್ಲ ಎಂಬುದು ಅವರ ದೂರಾಗಿತ್ತು. ಸುಮಾರು ನಲವತ್ತರ ವಯಸ್ಸಿನ, ಆ ವ್ಯಕ್ತಿಯು ಕಡಿಮೆ ಸಂಬಳ ಬರುವ ದಿನಗೂಲಿ ಕಾರ್ಮಿಕರಂತೆ ಕಾಣುತ್ತಿದ್ದರು. ಅವರು ಮುಚ್ಚುಮರೆಯಿಲ್ಲದೇ ಹೇಳಿದ ಪ್ರಕಾರ, ಈ ಶಾಲೆಯಲ್ಲಿ ಓದುತ್ತಿದ್ದ ತಮ್ಮ ಮಗನಿಗೆ ವಿದ್ಯಾಭ್ಯಾಸವನ್ನು ಮುಂದುವರೆಸಲಾಗದಂತೆ ಅನುತ್ತೀರ್ಣಗೊಳಿಸಿದರೆ ಬೇರೆ ಯಾವುದೇ ಖಾಸಗಿ ಶಾಲೆಗಳಲ್ಲಿ ಅವನನ್ನು ಸೇರಿಸುವುದಕ್ಕೆ ಹೆಚ್ಚಿನ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಆದರೆ ಅವರಿಗೆ ಅದು ಸಾಧ್ಯವಾಗುವುದಿಲ್ಲ.

ಶಿಕ್ಷಕರಲ್ಲಿ ಹಿರಿಯರಾಗಿದ್ದವರು ಆತ ಹೇಳುವುದನ್ನು ಸಹನೆಯಿಂದ ಕೇಳಿಸಿಕೊಂಡರು. ನಂತರ, ಸ್ನೇಹಪರತೆಯಿಂದ ಆದರೆ ದೃಢವಾದ ದನಿಯಲ್ಲಿ ಆ ವ್ಯಕ್ತಿಯೊಂದಿಗೆ ಮಾತನಾಡಿದರು. ಶಾಲೆಯಲ್ಲಿ ಕನಿಷ್ಠ ಕಲಿಕೆಯ ಮಟ್ಟವನ್ನು ನಿರೀಕ್ಷಿಸಲಾಗಿತ್ತು. ಆದರೆ ಆ ಹುಡುಗನು ಅದನ್ನು ತಲುಪಲು ಬೇಕಾಗಿದ್ದ ಶ್ರಮವನ್ನು ಹಾಕದೇ ಇರುವುದು ಸ್ಪಷ್ಟವಾಗಿತ್ತು. ಈಗ ಫಲಿತಾಂಶವನ್ನು ಬದಲಾಯಿಸುವ ನಿಟ್ಟಿನಲ್ಲಿ ಏನನ್ನೂ ಮಾಡಲಾಗುವುದಿಲ್ಲ ಎಂಬುದಾಗಿ ಅವರು ಹೇಳಿದರು. ಹುಡುಗನು, ಕೊಟ್ಟ ಹೋಂವರ್ಕ್‌ಗಳನ್ನು ಮಾಡಿ ಮುಗಿಸಿದ್ದರೆ, ಶ್ರದ್ಧಾಪೂರ್ವಕವಾಗಿ ಅಭ್ಯಾಸ ಮಾಡಿದ್ದರೆ, ಅವನು ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು. ಒಂದೊಮ್ಮೆ ವಿದ್ಯಾರ್ಥಿಯು ವಿದ್ಯಾಭ್ಯಾಸವನ್ನು ಈ ರೀತಿಯಲ್ಲಿಯೇ ಮುಂದುವರೆಸಿದರೂ ಮುಂದಿನ ವರ್ಷ ಹತ್ತನೆಯ ತರಗತಿಗೆ ಬಂದಾಗ ರಾಜ್ಯ ಪರೀಕ್ಷಾ ಮಂಡಳಿಯು ನಡೆಸುವ ಪಬ್ಲಿಕ್ ಪರೀಕ್ಷೆಯಲ್ಲಿ ಒಳ್ಳೆಯ ಸಾಧನೆಯನ್ನು ತೋರಲಾರ ಎಂಬ ಪೂರ್ವಾನುಮಾನವನ್ನು ಕೂಡ ವ್ಯಕ್ತಪಡಿಸಿದರು.

ಇದು ಬೆಂಗಳೂರಿನ ಹೊರಭಾಗದಲ್ಲಿರುವ, ಅತ್ತಿಬೆಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲೊಂದರಲ್ಲಿ, ಶಾಲೆ ಪುನರಾರಂಭವಾದ ಮೂರನೆಯ ದಿನ ಕಂಡ ದೃಶ್ಯ. ವಿದ್ಯಾರ್ಥಿಯು ಅದೇ ಆವರಣದಲ್ಲಿರುವ ಮಾಧ್ಯಮಿಕ ಶಾಲೆಯಲ್ಲಿ ಓದಿರುವನೆಂಬುದು ಹಾಗೂ ಅಲ್ಲಿನ ಪ್ರೌಢಶಾಲೆಯಲ್ಲೇ ಓದುತ್ತಿರುವನೆಂಬುದು ಸ್ಪಷ್ಟ. ತಾನು ಮನಸ್ಸು ಬಿಚ್ಚಿ ತನ್ನ ಅಳಲನ್ನು ಹೇಳಿಕೊಳ್ಳಬಹುದು ಎಂದೆನ್ನಿಸಿದ ಶಿಕ್ಷಕರ ಬಳಿ ತನ್ನ ಕಳವಳವನ್ನು ಹಂಚಿಕೊಳ್ಳುತ್ತಿದ್ದರು ಆ ಬಡಪಾಯಿ ಪೋಷಕ.

ನಾನು ಶಾಲೆಗೆ ಭೇಟಿಯಿತ್ತ ಸಮಯದಲ್ಲಿ ನನಗೆ ತಿಳಿದು ಬಂದ ಇನ್ನೂ ಹೆಚ್ಚಿನ ಕುತೂಹಲಕರ ಸಂಗತಿಯೆಂದರೆ, ಪ್ರೌಢಶಾಲೆಯ ಆ ಮುಖ್ಯೋಪಾಧ್ಯಾಯರು ಸಾಕಷ್ಟು ಕಟ್ಟುನಿಟ್ಟಿನ ಪ್ರಕ್ರಿಯೆ ಅನುಸರಿಸುವವರಾಗಿದ್ದರು. ಅಕ್ಕಪಕ್ಕದ ಖಾಸಗಿ

ಶಾಲೆಗಳಲ್ಲಿ ಕಳಪೆ ಶೈಕ್ಷಣಿಕ ಸಾಧನೆಯ ಕಾರಣ ದಾಖಲಾತಿ ಸಿಗದ, ಈ ಶಾಲೆಯಲ್ಲಿ ಹತ್ತನೆಯ ತರಗತಿಗೆ ದಾಖಲಾತಿಯನ್ನು ಬಯಸಿ ಬರುವ ವಿದ್ಯಾರ್ಥಿಗಳಿಗೆ ಅನೌಪಚಾರಿಕ ಪರೀಕ್ಷೆಯನ್ನು ಕೂಡ ನಡೆಸುತ್ತಿದ್ದರು. ಇದು, ಶೈಕ್ಷಣಿಕವಾಗಿ ಸಮಾಧಾನಕರ ಫಲಿತಾಂಶವನ್ನು ಪಡೆಯಲು ಅಸಮರ್ಥರಾದ ವಿದ್ಯಾರ್ಥಿಗಳ ಕಾರಣದಿಂದ, ಹತ್ತನೆಯ ತರಗತಿಯ ವಾರ್ಷಿಕ ಪರೀಕ್ಷೆಗಳಲ್ಲಿ ಶಾಲೆಯ ಒಟ್ಟಾರೆ ಸಾಧನೆಯು ಇಳಿಮುಖವಾಗಬಾರದು ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿತ್ತು.

ಮೇಲಿನ ಪಾಲಕ–ಶಿಕ್ಷಕ ಸಂಭಾಷಣೆಯಿಂದ ನಾನು ಗ್ರಹಿಸಿದ್ದೆಂದರೆ, ಬಹುಶಃ ಆ ಬಡ ಕೂಲಿಕಾರನ ಮಗನು ತನ್ನ ಜೀವನದಲ್ಲಿ ಶಾಲೆಗೆ ಹೋಗಿದ್ದು ಅದೇ ಕೊನೆಯ ದಿನವಾಗಿದ್ದಿರಬೇಕು. ಅವನು ಮತ್ತೆ ಶಾಲೆಗೆ ಹಿಂದಿರುಗಿ ಬರುವ ಸಾಧ್ಯತೆಯೂ ಅತ್ಯಂತ ಕಡಿಮೆ ಇತ್ತು. ಈ ವೈಫಲ್ಯದ ಕಾರಣ ಹುಡುಗನ ಆತ್ಮವಿಶ್ವಾಸವು ನುಚ್ಚುನೂರಾಗಿರುತ್ತದೆ, ಆತ ಈ ಹಂತವನ್ನು ಹೇಗೋ ಪಾರಾಗಿಬಿಟ್ಟರೆ ಮುಂದೆ ತನ್ನ ತಂದೆಯ ಹಾದಿಯನ್ನೇ ಅನುಸರಿಸಿ ಗ್ಯಾರೇಜಿನಲ್ಲೋ ವಾಹನ ದುರಸ್ತಿ ಮಾಡುವ ಅಂಗಡಿಯಲ್ಲೋ ಮತ್ತೊಬ್ಬ ಕಾರ್ಮಿಕನಾಗಿ ಜೀವಮಾನವಿಡೀ ಉಳಿವಿಗಾಗಿ ಹೋರಾಡುತ್ತ ಕಳೆಯಬಹುದು ಎಂದು ಊಹಿಸಿಕೊಂಡೆ.

ಮೇಲಿನ ಘಟನೆಯನ್ನು ನಾನು ನಿರೂಪಿಸುತ್ತಿರುವ ಈ ಹೊತ್ತಿನಲ್ಲಿಯೇ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡದೊಂದು ಚರ್ಚೆ ನಡೆಯುತ್ತಿರುವುದು ಕೇವಲ ಕಾಕತಾಳೀಯವಲ್ಲ. ಹದಿನೆಂಟು ರಾಜ್ಯಗಳು ಶಿಕ್ಷಣ ಹಕ್ಕು ಕಾಯ್ದೆ(ಆರ್‌ಟಿಇ) ಯಲ್ಲಿನ ಅನುತ್ತೀರ್ಣರಹಿತ ನೀತಿಯನ್ನು ತೆಗೆದು ಹಾಕುವುದರ ಪರವಾಗಿವೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ನೇಮಿಸಿದ ಉನ್ನತ ಮಟ್ಟದ ಸಮಿತಿಯೊಂದು ಈ ನೀತಿಯು ಆರನೆಯ ತರಗತಿಗೆ ಕೊನೆಗೊಳ್ಳಬೇಕು ಎಂದು ಶಿಫಾರಸ್ಸು ಮಾಡಿದೆ. ಶಿಕ್ಷಣ ಹಕ್ಕು ಕಾಯ್ದೆ ಅನುಚ್ಛೇದ 16, 'ತಡೆಹಿಡಿಯುವುದು ಹಾಗೂ ಉಚ್ಚಾಟನೆಯ ನಿಷೇಧ'ದ ಕುರಿತಾಗಿದೆ. 'ಶಾಲೆಗೆ ದಾಖಲಾದ ಯಾವುದೇ ಮಗುವನ್ನೂ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯುವ ತನಕ, ಅಂದರೆ ಎಂಟನೆಯ ತರಗತಿಯ ತನಕ ಯಾವುದೇ ತರಗತಿಯಲ್ಲಿ ತಡೆಹಿಡಿಯಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು' ಎಂದು ಅದು ಹೇಳುತ್ತದೆ.

ಅದೃಷ್ಟಕ್ಕೆ ಈ ಶಿಶುಸ್ನೇಹಿ ನೀತಿಯನ್ನು ಉಳಿಸಿಕೊಳ್ಳಲು ಉದ್ದೇಶಿಸಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಕೇಂದ್ರ ಸರ್ಕಾರದ ಮಾನವ

ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಈ ಪ್ರಮುಖ ಸಮಸ್ಯೆಯನ್ನು ನಿಭಾಯಿಸಲು ಇನ್ನೂ ಹೆಣಗಾಡುತ್ತಿರುವ ಈ ಸಂದರ್ಭದಲ್ಲಿ ಪ್ರಗತಿಪರ ಶಿಕ್ಷಣ ಹಕ್ಕು ಕಾಯ್ದೆಯ ಹಿಂದಿನ ಉದ್ದೇಶವನ್ನು ಮುಖ್ಯವಾಗಿ ಗೌರವಿಸಲೇಬೇಕಾಗಿದ್ದು ಇದರೊಂದಿಗೆ ನಿಕಟ ಸಂಬಂಧ ಹೊಂದಿರುವ ಆದರೆ ಬಹಳಷ್ಟು ತಪ್ಪು ತಿಳುವಳಿಕೆಗೆ ಗ್ರಾಸವಾಗಿರುವ ಹಾಗೂ ಕೆಟ್ಟದಾಗಿ ಅನುಷ್ಠಾನಗೊಂಡಿರುವ ಮತ್ತೊಂದು ಮೌಲ್ಯಮಾಪನ ಕ್ರಮ, ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ(ಸಿಸಿಇ)ದ ಆಶಯವನ್ನು ತಿಳಿದುಕೊಳ್ಳಬೇಕಿದೆ. ಒಂದೇ ವಯೋಗುಂಪಿನ ಮಕ್ಕಳು ತಮ್ಮದೇ ವ್ಯಕ್ತಿಗತ ಗತಿಯಲ್ಲಿ ಕಲಿಯುತ್ತಾರೆ ಹಾಗೂ ನಿರೀಕ್ಷಿತ ಕಲಿಕೆಯ ಮಟ್ಟವನ್ನು ಶಿಕ್ಷಣದ ವಿವಿಧ ಹಂತಗಳ ಮೂಲಕ ಗಳಿಸಿಕೊಳ್ಳುತ್ತಾರೆ ಎನ್ನುವುದು ನಿರಂತರ ಹಾಗೂ ಸಮಗ್ರ ಮೌಲ್ಯಮಾಪನದ ಅಂತರ್ಗತ ನಂಬಿಕೆ. ನಾವು ಒಮ್ಮೆ ಈ ಅಂಶವನ್ನು ಗುರುತಿಸಿದರೆ, ನಂತರ ಮಕ್ಕಳು ತರಗತಿಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎನ್ನುವುದು ಅದರಲ್ಲೇ ಅಡಕವಾಗಿರುವ ತರ್ಕ. ಇದು ಕಡ್ಡಾಯ ಅನುತ್ತೀರ್ಣರಹಿತ ನೀತಿಯ ತಿರುಳು. ಈ ನೀತಿಯನ್ನು ತೆಗೆದು ಹಾಕಬೇಕೆಂದು ಜೋರಾಗಿಯೇ ವಾದಿಸುತ್ತಿರುವವರು, ಮಗು ನಿರಂತರ ಕಲಿಕೆಯ ಮೂಲಕ ಜ್ಞಾನವನ್ನು ಹಂತಹಂತವಾಗಿ ಪಡೆದುಕೊಳ್ಳುತ್ತದೆ ಎಂಬುದನ್ನು ಒಪ್ಪಲು ವಿಫಲರಾದ ಕಾರಣ, ತಮ್ಮ ಆಲೋಚನೆಗಳಲ್ಲಿ ತಿರೋಗಾಮಿಗಳಾಗಿದ್ದಾರೆ ಎನ್ನುವುದು ಸ್ಪಷ್ಟ.

ಅನುತ್ತೀರ್ಣತೆಯ ಪ್ರತಿಪಾದಕರು ಒಪ್ಪದ ಇನ್ನೊಂದು ಆಯಾಮವೆಂದರೆ, ಯಾವ ವಿದ್ಯಾರ್ಥಿಯೂ ಬದುಕಿನ ಎಲ್ಲಾ ಆಯಾಮಗಳಲ್ಲಿಯೂ 'ವಿಫಲ'ನಾಗಿರುವುದಿಲ್ಲ ಎನ್ನುವುದು. ಒಬ್ಬರು ಗಣಿತದಲ್ಲಿ ಅಥವಾ ಇಂಗ್ಲಿಷಲ್ಲಿ ಚೆನ್ನಾಗಿಲ್ಲದಿರಬಹುದು. ಆದರೆ ಸಂಗೀತ ಅಥವಾ ಕ್ರೀಡೆಗಳಲ್ಲಿ ಉತ್ತಮ ಸಾಧನೆಗೈಯುವ ಸಾಮರ್ಥ್ಯವನ್ನು ಹೊಂದಿರಬಹುದು. 'ವಿಫಲರು' ಎಂದು ಕರೆಯಲ್ಪಡುವವರು ಅತ್ಯುತ್ತಮವಾದ ಸಾಮಾಜಿಕ ಕೌಶಲ್ಯಗಳನ್ನು ಹೊಂದಿರುವ ಸಾಧ್ಯತೆಯೂ ಕೂಡ ಇದೆ. ಸಂವೇದನಾಶೀಲತೆಯನ್ನು ಹಾಗೂ ಇತರರೊಡನೆ ಅರ್ಥಪೂರ್ಣವಾಗಿ ತೊಡಗಿಕೊಳ್ಳುವ ಸಾಮರ್ಥ್ಯವನ್ನು ಅವರು ಹೊಂದಿರುತ್ತಾರೆ. ಈಗ ಜಾರಿಯಲ್ಲಿರುವ ನಮ್ಮ ಮೌಲ್ಯಮಾಪನದ ಮಾನದಂಡಗಳು ಈ ಗುಣವೈಶಿಷ್ಟ್ಯಗಳನ್ನು ಅಥವಾ ಸಾಮರ್ಥ್ಯಗಳನ್ನು ಪರಿಗಣಿಸುವುದೇ ಇಲ್ಲ ಮತ್ತು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಲಾಗುತ್ತದೆ.

ನನ್ನದೇ ಉದಾಹರಣೆಯನ್ನು ಹೇಳಬೇಕೆಂದರೆ, ಈಗ್ಗೆ ಸುಮಾರು ನಲವತ್ತು ವರ್ಷಗಳ ಹಿಂದೆ, ಪದವಿಪೂರ್ವ ಹಂತದ ಮೊದಲನೆಯ ವರ್ಷದ ಅಂತಿಮ ಪರೀಕ್ಷೆಯಲ್ಲಿ ಅಕೌಂಟೆನ್ಸಿಯಲ್ಲಿ ಉತ್ತೀರ್ಣನಾಗಲು ಆಗದಿದ್ದುದಕ್ಕೆ 'ವಿಫಲ'

ಎಂಬ ಹಣೆಪಟ್ಟಿಯನ್ನು ನಾನು ಅಂಟಿಸಿಕೊಳ್ಳಬೇಕಾಯಿತು. ಎರಡೂ ಭಾಷೆಗಳಲ್ಲಿ ಸಾಕಷ್ಟು ಉತ್ತಮ ಅಂಕಗಳನ್ನು ಪಡೆದಿದ್ದೆ. ಅದಕ್ಕಿಂತ ಸ್ವಲ್ಪ ಸಾಧಾರಣ ಎನಿಸುವ ಅಂಕಗಳು ಉಳಿದ ವಿಷಯಗಳಲ್ಲಿ ಬಂದಿದ್ದವು. ಎಲ್ಲದಕ್ಕೂ ಹೆಚ್ಚಾಗಿ, ನಾನು ನನ್ನ ಕಾಲೇಜಿನ ಕ್ರಿಕೆಟ್ ತಂಡವನ್ನು ಪ್ರತಿನಿಧಿಸುತ್ತಿದ್ದೆ. ಕ್ರೀಡಾ ವಿಭಾಗಕ್ಕೆ ಇದ್ದ ಸೀಟು ಹಂಚಿಕೆಯ ಮೂಲಕವೇ ಆ ಖ್ಯಾತ ವಿದ್ಯಾಲಯದಲ್ಲಿ ದಾಖಲಾತಿ ಪಡೆದಿದ್ದೆ. ಆ ತಂಡದಲ್ಲಿ ಸೇರಿಕೊಳ್ಳುವುದು ತುಂಬಾ ಕಷ್ಟಕರವಾಗಿತ್ತು. ಏಕೆಂದರೆ, ಅದರಲ್ಲಿ ಕ್ರೀಡಾತಾರೆಗಳೇ ತುಂಬಿದ್ದರು (ಅವರಲ್ಲಿ ಹಲವರು ಆಗಲೇ ರಾಜ್ಯ ರಣಜಿ ಟ್ರೋಫಿ ತಂಡವನ್ನು ಪ್ರತಿನಿಧಿಸಿದ ಮನ್ನಣೆಗೆ ಪಾತ್ರರಾಗಿದ್ದರು). ಅವರಲ್ಲಿ ದೇಶಕ್ಕೆ ಹೆಮ್ಮೆ ತಂದ, ರಾಹುಲ್ ದ್ರಾವಿಡ್ ಕೂಡ ಸೇರಿದ್ದರು. ಅವರೂ ಮುಂದೆ, ಇದೇ ಕಾಲೇಜಿನಿಂದ ತೇರ್ಗಡೆಯಾದರು. ಈ ಹಿನ್ನಡೆಯಿದ್ದರೂ ನಂತರದಲ್ಲಿ ನನಗಿದ್ದ ಬಲವಾದ ಕೌಟುಂಬಿಕ ಬೆಂಬಲ, ಕ್ರಿಕೆಟ್‌ನಿಂದ ಬೆಳೆಸಿಕೊಂಡ ಹೋರಾಟದ ಮನೋಭಾವ ಹಾಗೂ ಸ್ನೇಹಿತರ ಒತ್ತಾಸೆಯಿಂದಾಗಿ ತಿದ್ದುಪಡಿ ಮಾಡಿಕೊಂಡು ವೈಫಲ್ಯವನ್ನು ಗೆಲ್ಲಲು ಸಾಧ್ಯವಾಯಿತು.

ಆದರೆ, ಬೇರೆ ಎಲ್ಲರಿಗೂ ವಿಶೇಷವಾಗಿ, ಪಾಲಕರು ಅಥವಾ ಅಜ್ಜ–ಅಜ್ಜಿಯರು ಶಿಕ್ಷಿತರಾಗಿರದ ಕುಟುಂಬಗಳಿಂದ ಬಂದ ಮಕ್ಕಳಿಗೆ ಇದೇ ಅನುಕೂಲಕರ ಪರಿಸ್ಥಿತಿ ಇರುವುದಿಲ್ಲ. ಅನುತ್ತೀರ್ಣಗೊಂಡ ವಿದ್ಯಾರ್ಥಿಯು ಹುಡುಗಿಯಾಗಿದ್ದರೆ ಹಾಗೂ ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳಲ್ಲೊಂದಕ್ಕೆ ಸೇರಿದ್ದು, ಕನಿಷ್ಠ ಆದಾಯ ಹೊಂದಿದ್ದರೆ ಸವಾಲು ಇನ್ನಷ್ಟು ತೀವ್ರವಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ, ಆಕೆಯ ಕುಟುಂಬವು ಸಾಧ್ಯವಾದಷ್ಟು ಬೇಗ ಅವಳನ್ನು ಮದುವೆ ಮಾಡಿ ಕಳುಹಿಸಲು ಉತ್ಸುಕವಾಗಿರುತ್ತದೆ. ಏಕೆಂದರೆ, ಶಿಕ್ಷಣವನ್ನು ಮುಂದುವರೆಸುವುದರಿಂದ ಅವಳಿಗೆ ಸದ್ಯದಲ್ಲಿ ಯಾವ ಪ್ರಯೋಜನವೂ ಇಲ್ಲ ಎಂದು ಕುಟುಂಬದ ಸದಸ್ಯರು ಬಲವಾಗಿ ನಂಬಿರುತ್ತಾರೆ. ಈ ಹಿನ್ನೆಲೆಯಲ್ಲಿ ಯಾವುದೇ ತರಹದ ಆರಂಭಿಕ ವೈಫಲ್ಯ ಎಂದರೆ, ಶಿಕ್ಷಣದಿಂದ ಶಾಶ್ವತವಾಗಿ ಸಂಬಂಧ ಕಡಿದುಕೊಳ್ಳುವುದು ಎಂದೇ ಅರ್ಥ. ಇದು ಹುಡುಗಿ ಮತ್ತವಳ ಕುಟುಂಬವನ್ನು 'ಕಡಿಮೆ ಶಿಕ್ಷಣ – ಕಡಿಮೆ ಆರ್ಥಿಕ ಅವಕಾಶ – ಕಡಿಮೆ ಗಳಿಕೆ ಸಾಮರ್ಥ್ಯ – ಕಡಿಮೆ ಸಾಮಾಜಿಕ, ಆರ್ಥಿಕ ಸ್ಥಾನಮಾನ...' ಇದೇ ವಿಷವರ್ತುಲ ದೊಳಕ್ಕೆ ಇರುವಂತೆ ಮಾಡುತ್ತದೆ. ಅದಕ್ಕೂ ಮಿಗಿಲಾಗಿ ಆ ಹುಡುಗಿಯ ಮಕ್ಕಳೂ ಕೂಡ ಇದೇ ಜಾಲದೊಳಗೆ ಸಿಕ್ಕು ಒದ್ದಾಡುವ ಸಾಧ್ಯತೆಯೇ ಹೆಚ್ಚು.

ಕಡ್ಡಾಯ ಅನುತ್ತೀರ್ಣ ನೀತಿಯ ರದ್ಧತಿಯು ವೈಫಲ್ಯದ ಭೀತಿಯು ಪ್ರಧಾನವಾಗಿರುವ ಪರಿಸರದಲ್ಲಿಯೂ ಮಕ್ಕಳು ಕಲಿಯಬಲ್ಲರು ಎಂಬ ದೋಷಪೂರ್ಣ ನಂಬಿಕೆಯನ್ನು ಬಲಗೊಳಿಸುತ್ತದೆ. ಅನುತ್ತೀರ್ಣರಹಿತ

ನೀತಿಯನ್ನು ರದ್ದುಗೊಳಿಸುವ ಆಲೋಚನೆಯು ಮಕ್ಕಳ ಕಲಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಅಗತ್ಯಕ್ಕೆ ವಿರುದ್ಧವಾದುದಾಗಿದೆ. ರಚನಾತ್ಮಕ ಹಾಗೂ ದಂಡನಾರಹಿತ ಮೌಲ್ಯಮಾಪನದ ಮೂಲಕ ಮಾತ್ರವೇ ಇಂತಹ ಕಲಿಕೆಗೆ ಅನುಕೂಲಕರ ವಾತಾವರಣ ನಿರ್ಮಿಸಲು ಸಾಧ್ಯ.

ಶಿಕ್ಷಣದಲ್ಲಿ ಆಸಕ್ತಿ ಹೊಂದಿರುವ ಭಾಗೀದಾರರೆಲ್ಲರೂ ಈ ಅಂಶವನ್ನು ಸರಿಯಾದ ದೃಷ್ಟಿಕೋನದಿಂದ ನೋಡಬೇಕಿದೆ. ಶಿಶುವಿರೋಧಿ ಕ್ರಮವನ್ನು ತರದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಅಗಾಧ ಒತ್ತಡವನ್ನು ಹೇರಬೇಕಿದೆ.

■

ಬಿ ಫಸ್ಟ್, 08–06–2016



26ನೇ ಆಗಸ್ಟ್ 2014 – ಕೇರಳದ ಶಾಲಾ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅರಿಯಲು ರಾಜ್ಯದ ಡಯಟ್ ಪ್ರಾಂಶುಪಾಲರೊಂದಿಗೆ ಭೇಟಿ ನೀಡಿದಾಗ ತ್ರಿಶೂರ್‌ನ ಡಯಟ್ ಮುಂದೆ ತೆಗೆದ ಚಿತ್ರ. ಅಲ್ಲಿನ ಪಾಲಕ–ಶಿಕ್ಷಕರ ಸಂಘಗಳು ಮತ್ತು ಸಮುದಾಯದ ಸಕ್ರಿಯ ಪಾತ್ರದಿಂದಾಗಿ ಸರ್ಕಾರಿ ಶಾಲೆಗಳು ಆಕರ್ಷಕವಾಗಿಯೂ ಕ್ರಿಯಾಶೀಲವಾಗಿಯೂ ನಿರ್ವಹಿಸಲಾಗುತ್ತಿದೆ. ಡಯಟ್‌ಗಳು ಶೈಕ್ಷಣಿಕ ಉಪಕ್ರಮಗಳು, ಸಂಶೋಧನೆ, ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ, ತಂತ್ರಜ್ಞಾನದ ಅಳವಡಿಕೆಯಂಥ ವಿಚಾರಗಳಲ್ಲಿ ಮುಂಚೂಣಿಯಲ್ಲಿವೆ.